# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

## ಗ್ರಂಥಾಲಯ

ಕ್ರಸಂ:ಕ.ರಾ.ಅ.ಮ.ವಿ.ವಿ./ಗ್ರಂ.ಸ.ಸ.ಸ./2020-21/305 ದಿನಾಂಕ: 05.11.2020

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, ಗ್ರಂಥಾಲಯದ, 2020-21ನೇ ಸಾಲಿನ ಗ್ರಂಥಾಲಯ ಸಲಹಾ ಸಮಿತಿ ಸಭೆಯನ್ನು ಜ್ಞಾನಶಕ್ತಿ ಆವರಣ, ಆಡಳಿತ ಭವನದ ಸಿಂಡಿಕೇಟ್ ಸಭಾ ಭವನದಲ್ಲಿ ದಿನಾಂಕ 05-11-2020 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿಸಲಾಯಿತು.

ಸಭೆಗೆ ಹಾಜರಾದ ಸದಸ್ಯರು:

| | |
|---|---|
| 1. ಪ್ರೊ. ಆರ್. ಸುನಂದಮ್ಮ, ಕುಲಸಚಿವರು | ಸಭಾಧ್ಯಕ್ಷರು |
| 2. ಶ್ರೀಮತಿ. ನಿವೇದಿತಾ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. ಡಾ. ಅರುಣ ಜೋಶಿ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 4. ಪ್ರೊ. ನಾಮದೇವ ಗೌಡ, ಡೀನರು, ಕಲಾ ನಿಕಾಯ ಸದಸ್ಯರು | ಸದಸ್ಯರು |
| 5. ಪ್ರೊ. ಜಿ.ಜಿ. ರಜಪೂತ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 6. ಪ್ರೊ. ಎನ್.ಎಲ್. ಮಲ್ಲಿಕಾರ್ಜುನ, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 7. ಪ್ರೊ. ಜ್ಯೋತಿ ದಾಮ್ ಪ್ರಕಾಶ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 8. ಡಾ. ಜ್ಯೋತಿ ಉಪಾಧ್ಯೆ, ದೈಹಿಕ ಶಿಕ್ಷಣ ನಿರ್ದೇಶಕರು | ಸದಸ್ಯರು |
| 9. ಪ್ರೊ. ಮಹೇಶ ಚಿಂತಾಮಣಿ, ಪ್ರಸಾರಂಗ ನಿರ್ದೇಶಕರು | ಸದಸ್ಯರು |
| 10. ಡಾ. ಗವಿಸಿದಪ್ಪಾ ಆನಂದಹಳ್ಳಿ, ಗ್ರಂಥಪಾಲಕರು | ಸಂಚಾಲಕರು |

ಸಭೆಗೆ ಹಾಜರಾಗದ ಸದಸ್ಯರು:

| | |
|---|---|
| 1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. ಪ್ರೊ. ಓಂಕಾರಗೌಡ ಕಾಕಡೆ, ಡೀನರು, ಸಮಾಜ ವಿಜ್ಞಾನ ನಿಕಾಯ | ಸದಸ್ಯರು |
| 3. ಪ್ರೊ. ವಿಜಯಾ. ಬಿ. ಕೋರಿಶೆಟ್ಟಿ, ಆರ್ಥಿಕ ಅಧಿಕಾರಿಗಳು | ಸದಸ್ಯರು |

# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

(ಹಿಂದಿನ ಪದನಾಮ: ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

## (ಗ್ರಂಥಾಲಯ)

ದಿನಾಂಕ 05-11-2020 ರಂದು ಬೆಳಿಗ್ಗೆ 11:30 ಗಂಟೆಗೆ ತೊರವಿ ಆವರಣದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳು

ಗ್ರಂಥಪಾಲಕರು ಸಭೆಗೆ ಹಾಜರಾದ ಸದಸ್ಯರುಗಳಿಗೆ ಸ್ವಾಗತಕೋರಿದರು. ನಂತರ ಸಭೆ ಪ್ರಾರಂಭವಾಯಿತು.

**ಐಟಂ ನಂ.1:** ದಿನಾಂಕ: 04-10-2019 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳ ಅನುಮೋದನೆಗಾಗಿ.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಧೃಡೀಕರಿಸಲಾಯಿತು

**ಐಟಂ ನಂ.2:** ದಿನಾಂಕ: 04-10-2019 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಮೇಲೆ ಜರುಗಿಸಲಾದ ಕ್ರಮಗಳ ಕುರಿತು.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಧೃಡೀಕರಿಸಲಾಯಿತು

**ಐಟಂ ನಂ.3:** 2020-21ನೇ ಸಾಲಿಗಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಯನ ವಿಭಾಗಗಳಿಗೆ ಹಣ ಹಂಚಿಕೆ ಮಾಡುವುದು, ಮತ್ತು ಗ್ರಂಥಗಳನ್ನು ಖರೀದಿಸುವ ಕುರಿತು.

ಪ್ರಸ್ತಾವನೆ:2020-21ನೇ ಸಾಲಿಗಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಯನ ವಿಭಾಗಗಳಿಗೆ ಗ್ರಂಥ ಖರೀದಿ ಪ್ರಕ್ರಿಯೆ ಪ್ರಾರಂಬವಾಗಿದ್ದು, ಗ್ರಂಥಾಲಯದ ಗ್ರಂಥ ಖರೀದಿ ನಿಯಮಾವಳಿಯಂತೆ ಗ್ರಂಥಗಳ ಸರಬರಾಜುದಾರರಿಗೆ 2020-21ನೇ ಸಾಲಿನ ಗ್ರಂಥಗಳನ್ನು ಪೂರೈಕೆ ಮಾಡಲು ಸದಸ್ಯತ್ವ ಪಡೆಯಲು ಪತ್ರಿಕಾ ಪ್ರಕಟಣೆ ನೀಡಿದ್ದು ಅದರಂತೆ 24 ಸರಬರಾಜುದಾರರು/ಪ್ರಕಾಶಕರು 1000ರೂ ಡಿ.ಡಿ ಸಲ್ಲಿಸಿರುತ್ತಾರೆ, ಅದರಂತೆ ವಿಶ್ವವಿದ್ಯಾನಿಲಯದ ಎಲ್ಲ ಅಧ್ಯಯನ ವಿಭಾಗಳಿಗೆ ಗ್ರಂಥಗಳ ಪಟ್ಟಿ ಸಲ್ಲಿಸಲು ಸುತ್ತೋಲೆ ಕಳಿಸಲಾಗಿದೆ. ಈಗಾಗಲೇ 20 ವಿಭಾಗಗಳಿಂದ ಗ್ರಂಥಗಳ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಉಳಿದ ವಿಭಾಗಗಳ ಗ್ರಂಥಗಳ ಪಟ್ಟಿಯನ್ನು ಗ್ರಂಥಾಲಯಕ್ಕೆ ತ್ವರಿತ ಗತಿಯಲ್ಲಿ ಪಡೆದು ಗ್ರಂಥಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕಾಗಿದ್ದು, ಆದ್ದರಿಂದ ವಿಭಾಗವಾರು ಈ ಕೆಳಕಂಡಂತೆ ಹಣ ಹಂಚಿಕೆ ಮಾಡಲಾಗಿದೆ. ಈ ವಿಷಯವನ್ನು ಗ್ರಂಥಾಲಯ ಸಲಹಾ ಸಮಿತಿ ಸಭೆಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

| Sl. No | Departments | Amount |
|---|---|---|
| 1 | Kannada | 30,000/- |
| 2 | Hindi | 30,000/- |
| 3 | Urdu | 30,000/- |
| 4 | English | 30,000/- |
| 5 | Sociology | 30,000/- |
| 6 | Political Science | 30,000/- |
| 7 | Economics | 30,000/- |
| 8 | History | 30,000/- |
| 9 | Social Work | 30,000/- |
| 10 | Women's Studies | 30,000/- |
| 11 | Library and Information Science | 30,000/- |
| 12 | Journalism and Mass communication | 30,000/- |
| 13 | Physics | 30,000/- |
| 14 | Chemistry | 30,000/- |
| 15 | Mathematics | 30,000/- |
| 16 | Statics | 30,000/- |
| 17 | Botany | 30,000/- |
| 18 | Zoology | 30,000/- |
| 19 | Biotechnology | 30,000/- |
| 20 | Bioinformatics | 30,000/- |
| 21 | Food and Nutrition | 30,000/- |
| 22 | Commerce | 30,000/- |
| 23 | Management | 30,000/- |
| 24 | Education | 30,000/- |
| 25 | Physical Education | 30,000/- |
| 26 | Performing Arts (Music) | 30,000/- |
| 27 | Yoga | 30,000/- |
| 28 | Computer Science M Sc and MCA | 50,000/- |

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಸದರಿ ಒಟ್ಟು 28 ಅಧ್ಯಯನ ವಿಭಾಗಗಳಿಗೆ ತಲಾ ರೂ.30,000/– ರಂತೆ ಹಣ ಹಂಚಿಕೆ ಮಾಡಿದ್ದು ವಿಶ್ವವಿದ್ಯಾನಿಲಯದ ಗ್ರಂಥಾಲಯ ಗ್ರಂಥ ಖರೀದಿ ನಿಯಮಾವಳಿ ಪ್ರಕಾರ ಗ್ರಂಥಗಳನ್ನು ಖರೀದಿಸಲು ತಿರ್ಮಾನಿಸಲಾಯಿತು.

**ಐಟಂ ನಂ.4:** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಮಂಡ್ಯ, ಸಿಂಧನೂರ, ಮತ್ತು ಉಡುತಡಿಗೆ ಗ್ರಂಥಗಳನ್ನು ಖರೀದಿಸುವ ಕುರಿತು.

**ಪ್ರಸ್ತಾವನೆ:** 2020–21 ನೇ ಸಾಲಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಮಂಡ್ಯ, ಸಿಂಧನೂರ, ಮತ್ತು ಉಡುತಡಿಗೆ ಗ್ರಂಥಗಳನ್ನು ಖರೀದಿಸುವ ಗ್ರಂಥಗಳ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಮೇಲಿನ ಮೂರು ಕೇಂದ್ರಗಳಿಗೆ ಈ ಕೆಳಗೆ ತಿಳಿಸಿದ ಹಾಗೆ

ಹಣ ಹಂಚಿಕೆ ಮಾಡಲಾಗಿದ್ದು ಮತ್ತು ಗ್ರಂಥಗಳ ಖರೀದಿ ಪ್ರಕ್ರಿಯೆ ಪ್ರಾರಂಬಿಸಲು ಗ್ರಂಥಾಲಯ ಸಲಹಾ ಸಮಿತಿ ಅನುಮೋದನೆಗೆ ಸಲ್ಲಿಸಲಾಗಿದೆ.

| | | |
|---|---|---|
| 01 | Extension Centre Mandya | 30,000/- |
| 02 | P.G. Center Shindhanur | 30,000/- |
| 03 | P.G. Center Udutadi | 20,000/- |

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಉಡತಡಿ ಕೇಂದ್ರಕ್ಕೆ ರೂ.20,000/–ನಿಗದಿಪಡಿಸಲಾಯಿತು ಉಳಿದಂತೆ ಮಂಡ್ಯ ಮತ್ತು ಸಿಂಧನೂರ ಕೇಂದ್ರಗಳಿಗೆ ತಲಾ ರೂ.30,000/– ಮೊತ್ತದ ಗ್ರಂಥಗಳನ್ನು ಖರೀದಿಸಲು ತೀರ್ಮಾನಿಸಲಾಯತು. ಇದರ ಜೊತೆಗೆ Common Paper ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳ ಖರೀದಿಸಲು ತೀರ್ಮಾನಿಸಲಾಯಿತು. ಎಲ್ಲ ಕೇಂದ್ರಗಳಿಗೆ ಮೀಸಲಿಟ್ಟ ಹಣದಲ್ಲಿ ಗ್ರಂಥಗಳನ್ನು ಖರೀದಿಸಲು ಅನುಮತಿ ನೀಡಲಾಯಿತು.

**ಐಟಂ ನಂ. 5:** ರೂಸಾ ಅನುದಾನದ ಅಡಿಯಲ್ಲಿ ಬಾಕಿ ಉಳಿದಿರುವ ಹಣದಲ್ಲಿ Classics ಗ್ರಂಥಗಳನ್ನು - ಮತ್ತು e-resource ಖರೀದಿಸುವ ಕುರಿತು ಚರ್ಚಿಸುವುದು.

ಪ್ರಸ್ತಾವನೆ: ರೂಸಾ ಅನುದಾನದ ಅಡಿಯಲ್ಲಿ ಬಾಕಿ ಉಳಿದಿರುವ ಹಣದಲ್ಲಿ Classics ಗ್ರಂಥಗಳನ್ನು (Rs 4,59,460) ಮತ್ತು e-resource (Rs. 8,65,79) ಖರೀದಿಸುವ ಕುರಿತು ಚರ್ಚಿಸುವದು.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ರೂಸಾ ಅನುದಾನದ ಅಡಿಯಲ್ಲಿ ಬಾಕಿ ಉಳಿದಿರುವ ರೂ.4,59,460/– ಮೊತ್ತದ ಹಣವನ್ನು Classics/Reference ಗ್ರಂಥಗಳನ್ನು ಖರೀದಿಸಲು ತೀರ್ಮಾನಿಸಲಾಯಿತು, ಮತ್ತು ರೂ. 86,579/– ಮೊತ್ತಗಳ ಇ–ಬುಕ್ಸ್‌ಗಳನ್ನು e-resource ಅಡಿಯಲ್ಲಿ ಸಂಬಂದಪಟ್ಟ ಪ್ರಕಾಶಕರ ಜೊತೆಗೆ ಚರ್ಚಿಸಿ ನಮ್ಮ C.D.P (Collection Development Policy) ಪ್ರಕಾರ ಖರೀದಿಸಲು ತೀರ್ಮಾನಿಸಲಾಯಿತು.

**ಐಟಂ ನಂ. 6:** ಗ್ರಂಥಪಾಲಕರ ಖಾತೆ ಸಂಖ್ಯೆಯಲ್ಲಿ (08542200002040) ವಿವಿಧ ಸೇವೆಗಳಿಂದ ಸಂಗ್ರಹಿಸಿದ ರೂ.1,00,000/–(ಒಂದು ಲಕ್ಷ ರೂಪಾಯಿ ಮಾತ್ರ)ಗಳನ್ನು ಆರ್ಥಿಕ ಅಧಿಕಾರಿಗಳು, ಕರಾಅಮವಿವಿ, ವಿಜಯಪುರ ಇವರ ಹೆಸರಿಗೆ ವರ್ಗಾಯಿಸುವ ಕುರಿತು.

ಪ್ರಸ್ತಾವನೆ: ಗ್ರಂಥಪಾಲಕರ ಖಾತೆ ಸಂಖ್ಯೆಯಲ್ಲಿ (08542200002040) ವಿವಿಧ ಸೇವೆಗಳಿಂದ ಸಂಗ್ರಹಿಸಿದ ರೂ. 1,00,000=00 (ಒಂದು ಲಕ್ಷಗಳು ಮಾತ್ರ)ಗಳನ್ನು ಆರ್ಥಿಕ ಅಧಿಕಾರಿಗಳು, ಕರಾಅಮವಿವಿ, ವಿಜಯಪುರ ಇವರ ಹೆಸರಿಗೆ ವರ್ಗಾಯಿಸುವ ಕುರಿತು.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯದ ಆರ್ಥಿಕ ಅಧಿಕಾರಿಗಳು, ಕರಾಮವಿವಿ ಇವರ ಖಾತೆಗೆ ಭರಿಸಿ ಗ್ರಂಥಾಲಯದ ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಅನುಮತಿ ನೀಡಲಾಯಿತು.

ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುವುದರಿಂದ (NACC) ನ್ಯಾಕ್‌ನ ಪ್ರಕಾರ ಆಯಾ ವಿಶ್ವವಿದ್ಯಾಲಯಗಳ ಸ್ಥಾನಿಕ Plagiarism Policy ಕಡ್ಡಾಯವಾಗಿ ತಮ್ಮ ತಮ್ಮ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಹಾಕಲು ಸೂಚಿಸಿದ್ದರಿಂದ ಈ ಸದರಿ ನಿಯಮಾವಳಿಗಳನ್ನು ತಯಾರಿಸಿದ್ದು ಇದನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ ಮಾಡಲು ಗ್ರಂಥಾಲಯ ಸಲಹಾ ಸಮಿತಿಯ ಅನುಮೋದನೆಗೆ ಸಲ್ಲಿಸಿದೆ.

### ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

Institutional Plagiarism Policyಯನ್ನು ನಮ್ಮ ವಿಶ್ವವಿದ್ಯಾನಿಲಯದ ವೈಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಅನುಮತಿ ನೀಡಲಾಯಿತು.

ಮುಂದುವರಿದು ಗ್ರಂಥಾಲಯದಿಂದ Ph.D Thesis ಮತ್ತು M.Phil Dissertation ಗಳನ್ನು ಕೃತಿ ಚೌರ್ಯ ಪರಿಕ್ಷೇಗೆ ಒಳಪಡಿಸಲಾಗುತ್ತಿತ್ತು. ಆದರೆ ಮಾನ್ಯ ಸಿಂಡಿಕೇಟ್ ಸದಸ್ಯರಾದ, ಶ್ರೀಮತಿ ನಿವೇದಿತಾ ರವರು P.G. ಕೋರ್ಸಗಳಲ್ಲಿ ಕೈಗೊಳ್ಳುವ Dissertation/Project Work ಗಳನ್ನು ಕೂಡಾ ಕಡ್ಡಾಯವಾಗಿ Plagiarism ಪರೀಕ್ಷೆಗೆ ಒಳಪಡಿಸುವುದು ಸೂಕ್ತ ಮತ್ತು ಇದರಿಂದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆಂದು ಸಲಹೆ ನೀಡಿದರು. ಇದನ್ನು ಗ್ರಂಥಾಲಯದ ಸಲಹಾ ಸಮಿತಿ ಸಭೆಯು ವಿವರವಾಗಿ ಚರ್ಚಿಸಿತು. ಈ ವಿಷಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ತಗೆದುಕೊಳ್ಳಲು ತೀರ್ಮಾನಿಸಲಾಯಿತು.

ಐಟಂ ನಂ.9: 2020-21ನೇಸಾಲಿಗೆ Subscription of New Journals / Renewal of Current Periodical/ Magazines/News Papers. ಕುರಿತು ಚರ್ಚಿಸುವುದು.

ಪ್ರಸ್ತಾವನೆ: ವಿಭಾಗಗಳ ಮುಖ್ಯಸ್ಥರ ಸ್ಪಷ್ಟ ಶಿಪಾರಸ್ಸಿನ ಮೇರೆಗೆ ನಿಯತಕಾಲಿಕೆಗಳ ನವೀಕರಣ ಮತ್ತು ಹೊಸ ನಿಯತಕಾಲಿಕೆಗಳ ಖರೀದಿಸಲು ಅನುಮತಿ ನೀಡುವ ಕುರಿತು.

### ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

2020-21ನೇ ಸಾಲಿಗೆ Subscription of New Journals / Renewal of Current Periodical/ Magazines/News Papers ಖರೀದಿಸಲು ಮತ್ತು ನವೀಕರಿಸಲು ಅನುಮೋದಿಸಲಾಯಿತು ಅಲ್ಲದೆ ಉರ್ದು ಅಧ್ಯಯನ ವಿಭಾಗದ ವಿದ್ಯಾರ್ಥಿನಿಯರಿಗೆ ಓದಲು ಗ್ರಂಥಾಲಯಕ್ಕೆ ಉರ್ದು ಪತ್ರಿಕೆ ತರಿಸಲು ತೀರ್ಮಾನಿಸಲಾಯಿತು.

ಐಟಂ ನಂ. 10: Digital ಗ್ರಂಥಾಲಯವನ್ನು ವಿಸ್ತರಿಸಲು, ಮತ್ತು ಗ್ರಂಥಾಲಯದ ಹೊಸ ಕಟ್ಟಡಗಳ ವಿಸ್ತೀರ್ಣವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಒಂದು ತಾಂತ್ರಿಕ ಸಮಿತಿಯನ್ನು ರಚಿಸಲು ಅನುಮತಿ ನೀಡುವ ಕುರಿತು.

ಪ್ರಸ್ತಾವನೆ: Digital ಗ್ರಂಥಾಲಯವನ್ನು ವಿಸ್ತರಿಸಲು ಮತ್ತು ರೂಸಾ ಅಡಿಯಲ್ಲಿ ಹೊಸದಾಗಿ ನಿರ್ಮಾಣವಾದಂತಹ ನೆಲಮಹಡಿ ಮತ್ತು Ist Floor ಕಟ್ಟಡ ವಿಸ್ತೀರ್ಣವನ್ನು ಸಮರ್ಪಕವಾಗಿ ಮತ್ತು

ವೈಜ್ಞಾನಿಕವಾಗಿ ಬಳಸಿಕೊಳ್ಳಲು ಒಂದು ತಾಂತ್ರಿಕ ಸಮಿತಿಯನ್ನು ರಚಿಸಲು ಅನುಮೋದನೆ ನೀಡುವ ಕುರಿತು.

ರೂಸಾ ಅನುದಾನದ ಅಡಿಯಲ್ಲಿ ನಿರ್ಮಾಣವಾದ ಹೊಸ ಕಟ್ಟಡ, ನೆಲಮಹಡಿ ಮತ್ತು Ist Floorಗಳು ಈಗಾಗಲೇ ಪೂರ್ಣಗೊಂಡಿದ್ದು ಗ್ರಂಥಾಲಯದ ಕೆಲವು ವಿಭಾಗಗಳನ್ನು ಸ್ಥಳಾಂತರಿಸಬೇಕಾಗಿದ್ದರಿಂದ ಹೊಸದಾಗಿ ಲಭ್ಯವಿರುವ ಕಟ್ಟಡದ ವಿಸ್ತೀರ್ಣವನ್ನು ಸಮರ್ಪಕವಾಗಿ ಮತ್ತು ವೈಜ್ಞಾನಿಕವಾಗಿ ಬಳಸಿಕೊಳ್ಳಲು ಹಾಗೂ Digital ಗ್ರಂಥಾಲಯವನ್ನು ವಿಸ್ತರಿಸಲು ಕೆಲವೊಂದು ತಾಂತ್ರಿಕ ಅಂಶಗಳ ಕುರಿತು ಒಂದು ತಾಂತ್ರಿಕ ಸಮಿತಿಯನ್ನು ರಚಿಸಬೇಕಾಗಿದ್ದರಿಂದ ಸದರಿ ಸಮಿತಿಯನ್ನು ರಚಿಸಲು ಗ್ರಂಥಾಲಯ ಸಲಹಾ ಸಮಿತಿ ಅನುಮೋದನೆಗಾಗಿ ಮಂಡಿಸಿದೆ.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಈ ಕೆಳಕಂಡ ತಾಂತ್ರಿಕ ಸಮಿತಿಯನ್ನು ರಚಿಸಲು ಸಭೆಯು ಅನುಮೋದನೆ ನೀಡಿತು.

ತಾಂತ್ರಿಕ ಸಮಿತಿ:

1. ಪ್ರೊ. ಪಿ.ಜಿ.ತಡಸದ, ಕುಲಸಚಿವರು (ಮೌಲ್ಯಮಾಪನ) — ಅಧ್ಯಕ್ಷರು
2. ಪ್ರೊ.ಜಿ.ಜಿ. ರಜಪೂತ, ಮುಖ್ಯಸ್ಥರು, ಗಣಕಯಂತ್ರ ವಿಭಾಗ — ಸದಸ್ಯರು
3. ಡಾ. ಸುರೇಶ ಜಂಗೆ, ಗ್ರಂಥಪಾಲಕರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ — ಸದಸ್ಯರು
4. ಡಾ. ರೋಹಿಣಿ ಭೂಸನೂರಮಠ, ಸಂಯೋಜಕರು, ICT Cell — ಸದಸ್ಯರು
5. ಡಾ.ಗವಿಸಿದ್ದಪ್ಪಾ ಆನಂದಹಳ್ಳಿ, ಗ್ರಂಥಪಾಲಕರು — ಸಂಚಾಲಕರು

ಸದರಿ ಸಮಿತಿ ಸಭೆಯನ್ನು ಜರುಗಿಸಿ ನಡವಳಿಗಳನ್ನು ಸಲ್ಲಿಸಲು ಸೂಚಿಸಲಾಯಿತು.

**ಐಟಂ ನಂ.11:** ಗ್ರಂಥಾಲಯದ ಗ್ರಂಥಗಳ ಭೌತಿಕ ಪರಿಶೀಲನೆಯ ವರದಿಯನ್ನು ಅನುಮೋದಿಸುವ ಕುರಿತು.

**ಪ್ರಸ್ತಾವನೆ:** ಗ್ರಂಥಾಲಯದಲ್ಲಿನ ಗ್ರಂಥಗಳ ಭೌತಿಕ ಪರಿಶೀಲನೆಯನ್ನು ಮಾಡಲು ದಿನಾಂಕ 25.09.2018 ರಂದು ಜರುಗಿದ ಗ್ರಂಥಾಲಯದ ಸಲಹಾ ಸಮಿತಿ ಮತ್ತು ದಿನಾಂಕ 11.10.2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿತ್ತು. ಅದರ ಪ್ರಕಾರ ಮಾನ್ಯ ಕುಲಪತಿಗಳಿಂದ ದಿನಾಂಕ 24.06.2019 ರಂದು ಅನುಮೋದನೆ ಪಡೆದು ಕುಲಸಚಿವರ ಕಛೇರಿ ಆದೇಶ ಸಂಖ್ಯೆ ಕರಾಮವಿವಿ/ಗ್ರಂಥಾಲಯ/ಭೌಪ/2019–20/46ರಂತೆ ದಿನಾಂಕ: 25.06.2019ರ ಪ್ರಕಾರ ಭೌತಿಕ ಪರಿಶೀಲನಾ ಸಮಿತಿ ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ 01.07.2019 ರಿಂದ 08.07.2019ರ ವರೆಗೆ ಗ್ರಂಥಾಲಯದ ಭೌತಿಕ ಪರಿಶೀಲನಾ ಕಾರ್ಯ ನಡೆಸಿ ವರದಿಯನ್ನು ಸಲ್ಲಿಸಿದ್ದು, ವರದಿ ಪ್ರಕಾರ 220 ಗ್ರಂಥಗಳು ಕಳೆದಿದ್ದು ಇವುಗಳನ್ನು U.G.C ನಿಯಮಾವಳಿಗಳ ಪ್ರಕಾರ Write off ಮಾಡಲು ಮಾನ್ಯ ಕುಲಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. U.G.C ನಿಯಮಾವಳಿಗಳ ಪ್ರಕಾರ ಇವುಗಳನ್ನು Missing ಎಂದು ಪರಿಗಣಿಸಿ ಅವಧಿ ಮುಗಿದ ನಂತರ U.G.C ನಿಯಮಾವಳಿಗಳ ಪ್ರಕಾರ General Finance Rules 2017 Ministry of Finance

Rule 215 Physical Verification of Library Books. ಪ್ರಕಾರ 1000 ಗ್ರಂಥಗಳ ಪರಿಚಲನೆಗೆ (ಎರವಲು) 05 ಗ್ರಂಥಗಳನ್ನು Write off ಮಾಡಬಹುದಾಗಿದ್ದು ಕರ್ನಾಟಕ ಸರ್ಕಾರ Department of Collegiate Education, The College Library Manual 9.2 Write off loss of Books ಪ್ರಕಾರ loss of 10 volumes per 1000 Books consulted may be write off ಮಾಡಬಹುದಾಗಿದ್ದು. ನಮ್ಮ ವರದಿಯ ಪ್ರಕಾರ ಒಟ್ಟು 220 ಗ್ರಂಥಗಳ ಕಳೆದು ಹೋಗಿದ್ದು ನಮ್ಮ ಗ್ರಂಥಾಲಯದ ದಾಖಲೆಗಳ ಪ್ರಕಾರ 50,000ಕ್ಕಿಂತ ಹೆಚ್ಚು ಗ್ರಂಥಗಳು ಪರಿಚಲನೆಗೊಂಡಿದ್ದು, ಇದರ ಪ್ರಕಾರ 250ರ ವರೆಗೆ ಗ್ರಂಥಗಳನ್ನು write off ಮಾಡಬಹುದಾಗಿದೆ. ಒಟ್ಟು ಕಳೆದ ಗ್ರಂಥಗಳು ಮಿತಿ ಒಳಗಡೆ ಇದ್ದುದರಿಂದ ಇವುಗಳನ್ನು U.G.C ನಿಯಮಾವಳಿಗಳ ಪ್ರಕಾರ Write off ಮಾಡಬಹುದಾಗಿದೆ.

ನಮ್ಮ ಗ್ರಂಥಾಲಯವು ತೆರದ ಪದ್ಧತಿ (Open Access System) ಅಳವಡಿಸಿಕೊಂಡಿದ್ದರಿಂದ ಮತ್ತು ಖಾಯಂ ಗ್ರಂಥಪಾಲಕರು, ಗ್ರಂಥಾಲಯ ಸಿಬ್ಬಂದಿ, ಇಲ್ಲದೆ ಇರುವುದರಿಂದ ಮತ್ತು ನಮ್ಮ ಗ್ರಂಥಾಲಯದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಗ್ರಂಥಗಳು ಇರುವುದರಿಂದ ಹಾಗೂ ಗ್ರಂಥಾಲಯವು ಹೆಚ್ಚಿನ ಓದುಗರು ಇರುವುದರಿಂದ ಗ್ರಂಥಗಳು ಕಳೆಯುವುದು ಸಾಮಾನ್ಯ ಅಂಶವೆಂದು ಪರಿಗಣಿಸಬಹುದಾಗಿದೆ. ಆದ್ದರಿಂದ ಈ ವಿಷಯವನ್ನು ಗ್ರಂಥಾಲಯದ ಸಲಹಾ ಸಮಿತಿ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

ಗ್ರಂಥಗಳ ಭೌತಿಕ ಪರಿಶೀಲನೆಯ ಪ್ರಕಾರ ಕಳೆದುಹೊದ 220 ಗ್ರಂಥಗಳನ್ನು ಯು.ಜಿ.ಸಿ. ನಿಯಮಾವಳಿ ಪ್ರಕಾರ Write Off ಮಾಡಲು ಅನುಮೊದಿಸಲಾಯಿತು. ಮತ್ತು ಕಳೆದುಹೋದ 220 ಗ್ರಂಥಗಳನ್ನು ಪರಿಗ್ರಹಣ ನೋಂದಣಿ ದಾಖಲಾತಿಯಿಂದ ತಗೆದು ಹಾಕಲು ಅನುಮೋದಿಸಲಾಯಿತು.

**ಐಟಂ ನಂ.12:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೇ ವಿಷಯಗಳು.

ಗ್ರಂಥಪಾಲಕರು ಸಭೆಯನ್ನು ಅರ್ಥಪೂರ್ಣಗೊಳಿಸಿ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ನೀಡಿದ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.

| | | |
|---|---|---|
| ಗ್ರಂಥಪಾಲಕರು | ಕುಲಸಚಿವರು | ಕುಲಪತಿಗಳು |
| ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ |